REGD.NEWS PAPER RNI 50347/1989
RNI.Reg.No.KA/BGGPO/2516/2021-23
Licenced to post without Pre-payment
Registered Regn.No.
WPP.CO-1
Posted at BANGALORE PSO, MYSORE ROAD,
BANGALORE – 560026

Date of publication 18th of every month
Date of despatch 20th & 21st of every month

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009

ದೂರವಾಣಿ : 080–22206151 – 22206152 – 22206153

Website : www.karnatakaaryavysyamahasabha.com E-mail : kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ: ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 35 ಜನವರಿ 2022 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 1



## ಅಧ್ಯಕ್ಷರ ನುಡಿ



ಸಂಕ್ರಾಂತಿ ದೇಶದೆಲ್ಲೆಡೆ ಆಚರಣೆ, ಹಬ್ಬ ಒಂದೇ ಆದರೂ ವಿವಿಧ ಹೆಸರುಗಳಿಂದ, ವಿವಿಧ ರೀತಿಯ ಆಚರಣೆಗಳು, **ಸಂಕ್ರಾಂತಿ** ಹಬ್ಬ ಪೌರಾಣಿಕ ಮತ್ತು ವೈಜ್ಞಾನಿಕ ಹಿನ್ನೆಲೆಯನ್ನು ಹೊಂದಿದೆ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವ ಕಾಲವನ್ನು **ಸಂಕ್ರಮಣ ಅಥವಾ ಸಂಕ್ರಾಂತಿ** ಎಂದು ಜೋತಿಷ್ಯಾಧಾರದ ಮೇಲೆ ಪರಿಗಣಿಸಲಾಗುವುದು. ಸಂಕ್ರಾಂತಿಯು ಒಂದು ವಿಧದಲ್ಲಿ ಸೂರ್ಯನ ಆರಾಧನೆಯಾಗಿದ್ದು, ಉತ್ತರಾಯಣ ಪುಣ್ಯಕಾಲ ಆರಂಭವಾಗುವ ಹಿನ್ನೆಲೆಯಲ್ಲಿ ಅಂದಿನ ದಿನ ದೇಶಾದ್ಯಂತ ಇರುವ ಪುಣ್ಯ ನದಿಗಳಲ್ಲಿ ಭಕ್ತ ವೃಂದವು ಸ್ನಾನ ಮಾಡಿ ಸೂರ್ಯ ದೇವನ ಆರ್ಶೀವಾದ ಪಡೆಯುವುದು ಉಂಟು. ಇಲ್ಲಿಯವರೆವಿಗೂ ದಕ್ಷಿಣದ ಕಡೆ ವಾಲಿದ್ದ ಸೂರ್ಯನು ಪಥ ಬದಲಿಸಿ ಉತ್ತರದ ಕಡೆ ಮುಖ ಮಾಡಿ ಚಲಿಸುತ್ತಾನೆ, ಹಾಗಾಗಿ ಸಂಕ್ರಾಂತಿಯ ದಿನದಿಂದ ಉತ್ತರಾಯಣ ಅಂದರೆ ದೇವತೆಗಳ ಕಾಲವೆಂದು ಈ ಉತ್ತರಾಯಣದಲ್ಲಿ ಹೋಮ, ಹವನ, ಪ್ರತಿಷ್ಠಾಪನೆ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಲು ಪ್ರಾಶ್ಯಸ್ತ ಕಾಲವೆಂದು ಸಹ ಜ್ಯೋತಿಷ್ಯ ಶಾಸ್ತ್ರದಲ್ಲಿ ತಿಳಿಸಲಾಗಿದೆ. ಸಂಕ್ರಾಂತಿಯಿಂದ ಸೂರ್ಯನ ಪಥ ಬದಲಾವಣೆ ಚಳಿ ಕಡಿಮೆಯಾಗುತ್ತದೆ. ಹಗಲು ಹೆಚ್ಚಾಗುತ್ತದೆ. ಪ್ರಕೃತಿಯಲ್ಲಿನ ಚಟುವಟಿಕೆಗಳು ಗರಿಗೆದರುತ್ತದೆ. ಅಂತಹ ವೈವಿದ್ಯಮಯ ಸಂಕ್ರಾಂತಿ ಹಬ್ಬವು ಪ್ರತಿಯೊಬ್ಬರ ಬಾಳಿನಲ್ಲಿ ಹೊಸ ಚೈತನ್ಯಗಳನ್ನು ಮೂಡಿಸಿ ಜೀವನದ ಮನೋವಾಂಚೆಗಳನ್ನು ಈಡೇ–ರಿಸಿಕೊಳ್ಳಲು ಅವಶ್ಯವಾದ ಆರೋಗ್ಯವನ್ನು, ಬುದ್ಧಿಯನ್ನು ಕರುಣಿಸಲೆಂದು ಪ್ರಾರ್ಥಿಸಿ ನಮ್ಮ ಓದುಗರೆಲ್ಲರಿಗೂ **ಸಂಕ್ರಾಂತಿ ಹಬ್ಬದ ಶುಭಾಷಯಗಳನ್ನು** ಕೋರುತ್ತೇನೆ.

### ಮಹಾಸಭೆ ಚುನಾವಣೆಗಳು

ಪ್ಲವ ನಾಮ ಸಂವತ್ಸರದ ಸಂಕ್ರಾಂತಿ ಅಂದರೆ 2022ನೇ ಇಸವಿಯ ಸಂಕ್ರಾಂತಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಪಾಲಿಗೂ ಹೊಸ ಕ್ರಾಂತಿಯ ಮುನ್ನುಡಿ ಬರೆಯುವಂತಹ ವರ್ಷವಾಗಿದೆ. ಈಗಾಗಲೇ ತಿಳಿಸಿರುವಂತೆ **ದಿನಾಂಕ: 6–2–2022ರಂದು ಮುಂದಿನ ಐದು ವರ್ಷಗಳ ಮಹಾಸಭೆ ಆಡಳಿತಕ್ಕೆ ಕಾರ್ಯಕಾರಿ ಸಮಿತಿಯನ್ನು ಆರಿಸುವ ಪರ್ವಕಾಲ.** ಈ ಪರ್ವಕಾಲದಲ್ಲಿ ಮಹಾಸಭೆಯ ಪ್ರತಿಯೊಬ್ಬ ಸದಸ್ಯರು ನಿಷ್ಟೆಯಿಂದ, ಪ್ರೀತಿಯಿಂದ ಚುನಾವಣೆಗಳಲ್ಲಿ ಸಕ್ರಿಯರಾಗಿ ತಪ್ಪದೇ ಮತದಾನ ಮಾಡಿ ಸಹಕರಿಸಿ. ಆರ್ಯವೈಶ್ಯ ಸಮಾಜದ ಅಭಿವೃದ್ಧಿಗಾಗಿ ತಾವು ಚುನಾವಣೆ ದಿನ ಕೇವಲ 30–40ನಿಮಿಷಗಳ ನಿಮ್ಮ ಸಮಯವನ್ನು ನೀಡಿ ಸಹಕರಿಸಿ. ನಿಮ್ಮ ಪ್ರತಿಯೊಂದು ಮತವೂ ಸಮಾಜದ ಅಭಿವೃದ್ಧಿಗೆ ಅಡಿಗಲ್ಲು, ಯೋಗ್ಯವ್ಯಕ್ತಿಗಳನ್ನು ಮಾತ್ರ ಸಂಸ್ಥೆಗೆ ಕಳುಹಿಸಿ ಕೊಟ್ಟು ತನ್ಮೂಲಕ ಸಾವಿರಾರು ಅಬಲರು–ಅಶಕ್ತರು ಮನೆ ಬೆಳಗಲು ನಿಮ್ಮ ಮತ ಸಹಕಾರಿಯಾಗಿರಬೇಕು. ನೀವು ಮತ ಚಲಾಯಿಸುವಾಗ ನಿಮ್ಮ ಭಾವನೆಗಳು ಶುದ್ದವಾಗಿರಲಿ, ನಿಮ್ಮ **ನಮ್ಮ ಊರಿನವರು, ನಮ್ಮ ಬಂಧು, ನಮ್ಮ ಸ್ನೇಹಿತ** ಎಂಬ ಸಂಕುಚಿತ ಅಲೋಚನೆಗಳಿಂದ ಮುಕ್ತರಾಗಿ ಇ**ವನು ಬುದ್ದಿವಂತ, ಇವನಿಗೆ ಸಮಾಜದ ಬಗ್ಗೆ ಕಳಕಳಿ ಇದೆ, ಇವನಿಂದ ಒಂದಿಷ್ಟು ಒಳ್ಳೆಯ ಕೆಲಸಗಳಾಗುತ್ತವೆ, ಇವನಿಂದ ಸಮಾಜದ ಘನತೆ ಗೌರವಗಳು ಹೆಚ್ಚುತ್ತದೆ** ಎಂಬ ಅಭಿವೃದ್ಧಿ ಪರ ವಿಷಯಗಳನ್ನು ಹೆಚ್ಚಿಸುವ ವ್ಯಕ್ತಿಗಳನ್ನು ಚುನಾಯಿಸಿ ಕಳುಹಿಸಿ ಕೊಡಿ, ನಿಮ್ಮ ಪರಿಶುದ್ದವಾದ ಮತಕ್ಕೆ **ಸಮಾಜವನ್ನು ಅಭಿವೃದ್ಧಿಯತ್ತ ಕೊಂಡ್ಯೊಯುವ ಪ್ರಬಲ ಶಕ್ತಿಯಿಂದ,** ಸಮಾಜದ ಪ್ರತಿಯೊಬ್ಬ ಬಂಧುವಿನ ಆತ್ಮವಿಶ್ವಾಸ ಬೆಳಗಿಸಿ ಸ್ವಾಭಿಮಾನಿ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ. ಆದುದರಂದಲೇ ನನ್ನ ಕಳಕಳಿಯ ಮನವಿ **ನಿಮ್ಮ ಮತ ನಿಮ್ಮ ಆತ್ಮಸಾಕ್ಷಿಯಾಗಿರಲಿ,** ಮುಂದಿನ ಐದು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಆರ್ಯವೈಶ್ಯ ಸಮಾಜದ ನವ ನಿರ್ಮಾಣವಾಗಿ ಇತರರಿಗೆ ಆದರ್ಶವಾಗುವಂತಾಗಲೆಂದು ಸಂಕ್ರಾಂತಿಯ ಶುಭ ಸಂದರ್ಭದಲ್ಲಿ ತಮ್ಮಲ್ಲಿ ನನ್ನ ವಿನಮ್ರ ಪ್ರಾರ್ಥನೆ.

### ಚುನಾವಣೆಗಳು ಅಭಿವೃದ್ಧಿಗೆ ಪೂರಕವಾಗಿರಲಿ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಚುನಾವಣೆಗಳು ಅವಶ್ಯವೂ, ಅನಿವಾರ್ಯವೂ ಹೌದು. ತುಂಬಾ ಚೆನ್ನಾಗಿ ಕೆಲಸ ಮಾಡಿದ್ದಾರೆ, ಮಾಡುತ್ತಿದ್ದಾರೆಂದು ಚುನಾವಣೆಗಳು ಇಲ್ಲದೆಯೇ ಕಾರ್ಯಕಾರಿ ಸಮಿತಿಯನ್ನು ಮುಂದುವರೆಸಲು ಸಾಧ್ಯವಿಲ್ಲಾ? **ಬಂಗಾರದ ಲೋಕ ಸೃಷ್ಟಿ ಮಾಡಿದ್ದರೂ, ಸಾವಿರಾರು ಸದಸ್ಯರು ನೀವೆ ಇರಿ, ಚುನಾವಣೆ ಯಾಕೆ, ಸುಮ್ಮನೆ ಖರ್ಚು ಎಂದು ಹೇಳಿದರೂ ಸಹ, ಕಾನೂನು ಗೌರವಿಸುವ ಪ್ರತಿಯೊಬ್ಬರೂ ಚುನಾವಣೆಗಳನ್ನು ನಡೆಸಲೇ ಬೇಕು. ಆದರೆ ಚುನಾವಣೆಗಳು ಆಡಳಿತಕ್ಕೆ ಪೂರಕವಾಗಿರಬೇಕೇ ವಿನಃ, ಸಮಾಜ ಸಂಘಟನೆಗೆ ಮಾರಕ ಆಗಬಾರದು** ಅಲ್ಲವೇ? ಚುನಾವಣೆಗಳು ಎಂದಾಕ್ಷಣ ಪರ–ವಿರೋದಗಳು ಇದ್ದದ್ದೇ, ಆದರೆ ವಿರೋದಗಳು ಅಭಿವೃದ್ಧಿಗೆ ಪೂರಕವಾಗಿರ ಬೇಕೇ ಹೊರತು ವಿರೋದಕ್ಕಾಗಿ ವಿರೋದ ಆಗಬಾರದು. ಸಾಮಾನ್ಯವಾಗಿ ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳು, ಅಭ್ಯರ್ಥಿ ಪರ ವ್ಯಕ್ತಿಗಳು ಪರಸ್ಪರ ನಿಂದನೆ, ವೈಯುಕ್ತಿಕ ನಿಂದನೆ, ತೇಜೋವಧೆಗಳಿಗೆ ಇಳಿಯುತ್ತಾರೆ. ಅದರಲ್ಲಿಯೂ ಇದು ಡಿಜಿಟಲ್ ಯುಗ, ಬೇಕು ಬೇಡಗಳನ್ನೇಲ್ಲಾ ಸಾಮಾಜಿಕ ಜಾಲತಾಣಗಳ ಮೂಲಕ ಹರಿಬಿಟ್ಟು, ನಮ್ಮ ಘನತೆ ಗೌರವಗಳನ್ನು, ಮಾನ ಮರ್ಯಾದೆಗಳನ್ನು ಪಣಕ್ಕಿಡುವುದರಿಂದ ಸಾಧಿಸಿದ್ದೇನು? ಸಮಾಜವನ್ನು ಸುಸ್ಥಿರಗೊಳಿಸುತ್ತೇವೆಂದು ಮಾತನಾಡುವ ನಾವು ಇಂತಹ ಕ್ಷುಲಕ ಪ್ರಚಾರ ತಂತ್ರಗಳಿಂದ ಸಮಾಜವನ್ನು ಅಸ್ಥಿರಗೊಳಿಸಿ, ಸಂಘಟನೆಯನ್ನು ವಿಭಜಿಸಿ, ದ್ವೇಷವೆಂಬ ವಿಷ ಬಿತ್ತಲು ನಾಂದಿಯಾಗುವುದಿಲ್ಲವೇ?

ಬಂಧುಗಳೇ, ಚುನಾವಣೆಗೆ ನಿಲ್ಲಲೂ ಪ್ರತಿಯೊಬ್ಬರಿಗೂ ಸಂಘದ ಉಪನಿಯಮಗಳಂತೆ ಅವಕಾಶವಿದೆ ಸ್ವತಂತ್ರವೂ ಇದೆ. ಸ್ಪರ್ಧಿಸಲು ಇಚ್ಚಿಸುವವರು ಚುನಾವಣೆಗಳಲ್ಲಿ ಸ್ಪರ್ಧಿಸಿ, ನಿಮ್ಮ ಊರಿನ/ಜಿಲ್ಲೆಯ **ಪ್ರಮುಖರು ಹೊಂದಾಣಿಕೆಗೆ ಪ್ರಯತ್ನ ಪಟ್ಟು ಅವಿರೋಧ ಆಯ್ಕೆಗೆ ಪ್ರಯತ್ನಿಸಿದರೆ ಸಹಕರಿಸಿ. ನೀವು ಒಳ್ಳೆಯವರು ಸರಿ, ನಿಮಗಿಂತ ಉತ್ತಮರು, ನಿಮಗಿಂತ ನಿಮ್ಮ ಎದುರಾಳಿ ಉತ್ತಮ ಕೆಲಸಗಾರರೆಂದು ನಿಮಗನ್ನಿಸಿದರೆ ಅವಿರೋಧ ಆಯ್ಕೆಗೆ ಸಹಕರಿಸಿ.** ಒಂದು ವೇಳೆ ನಿಮಗೆ ಚುನಾವಣೆಯಲ್ಲಿ ಸ್ವರ್ಧಿಸಲೇ ಬೇಕೆಂಬ ಇಚ್ಚೆಯಿದ್ದರೆ ಸ್ಪರ್ಧಿಸಿ, ಆರೋಗ್ಯ ಪೂರ್ಣ ಚುನಾವಣೆಗೆ ಸಹಕರಿಸಿ. **ಎದುರಾಳಿಗಳನ್ನು ಬಯ್ಯುವುದು, ಹಿಯಾಳಿಸುವುದು, ತೇಜೋವಧೆ, ವೈಯುಕ್ತಿಕ ಚಾರಿತ್ರ್ಯ ವಧೆ ಮಾಡುವುದು, ವೈಯುಕ್ತಿಕವಾಗಿ/ಸಂಘಗಳಿಗೆ ನಾನಾ ರೀತಿಯ ಆಮಿಷಗಳನ್ನು ಒಡ್ಡುವುದು ಉತ್ತಮ ಚುನಾವಣೆಗಳಿಗೆ ಮಾರಕವಾಗುತ್ತದೆ.**

ಆತ್ಮವಿಶ್ವಾಸದಿಂದ, ಆತ್ಮಸಾಕ್ಷಿಯಿಂದ ಚುನಾವಣೆಗಳನ್ನು ಎದುರಿಸಿ, ಚುನಾವಣೆಗಳಲ್ಲಿ, ಇದುವರೆವಿಗೂ ನಾವೇನು ಮಾಡಿದ್ದೇವೆ. **ಮುಂದೇನು** ಮಾಡುತ್ತೇವೆಂಬ **ನಿಮ್ಮ ಭಾವನೆಗಳನ್ನು ಮತದಾರರಿಗೆ ಮುಟ್ಟಿಸಿ,** ಮತದಾರನ ಮನಸ್ಸನ್ನು ಗೆಲ್ಲುವ ಪ್ರಯತ್ನ ಮಾಡಿ ಇದರಿಂದ ಚುನಾವಣೆ ನಂತರವೂ ಸಂಘಟನೆ ಸುಭದ್ರವಾಗಿರುತ್ತದೆ. ವೈಯುಕ್ತಿಕವಾಗಿ ನಮ್ಮ ಮೇಲೆ ಮತದಾರರಿಗೆ ಗೌರವ ಹೆಚ್ಚಾಗುತ್ತದೆ. ಚುನಾವಣೆಗಳು ಇತರ ಸಮಾಜದ ಬಂಧುಗಳಿಗೆ ಆದರ್ಶವಾಗುತ್ತದೆ. ಒಟ್ಟಾರೆ ಹೇಳುವುದಾದರೆ ಉತ್ತಮ ಕೆಲಸಗಳಲ್ಲಿ ಕಲ್ಲು ಹುಡುಕುವ ಬದಲಿಗೆ, ಉತ್ತಮ ಕೆಲಸಗಳನ್ನು ಮಾಡುತ್ತೇವೆಂಬ ವಿಶ್ವಾಸದಲ್ಲಿ ಚುನಾವಣೆಗಳನ್ನು ಎದುರಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ತಮ್ಮ ಶಕ್ತಿ ಸಾಮರ್ಥ್ಯ ಬುದ್ಧಿವಂತಿಕೆಗಳು ಪೂರಕವಾಗಿರಲೆಂದು ಆಶಿಸುತ್ತೇನೆ.

12 ವರ್ಷಗಳ ಕಾಲ ನಿಮ್ಮೊಂದಿಗೆ ನಾನೂ ಒಬ್ಬನಾಗಿ, ನಿಮ್ಮ ಸಲಹೆ–ಸಹಕಾರದ ಮೂಲಕ ಒಂದಿಷ್ಟು ಚೇತೋಹಾರಿ ಕಾರ್ಯಕ್ರಮಗಳ ಮೂಲಕ ಸಾವಿರಾರು ವಿದ್ಯಾರ್ಥಿಗಳ, ಸಾವಿರಾರು ಕುಲಭಾಂದವರ ನೆಮ್ಮದಿಗೆ ಕಾರ್ಯನಿರ್ವಹಿಸಿರುವ ಸೇವೆ ತೃಪ್ತಿ ನೀಡಿದೆ. ಸಮಾಧಾನ ತಂದಿದೆ. **ಮಾಡಿರುವುದು ಮುಷ್ಟಿಯಷ್ಟಾದರೂ, ಮಾಡ ಬೇಕಾದ್ದು ಬೆಟ್ಟದಷ್ಟಿದೆ.** ಪ್ರಾಮಾಣಿಕವಾದ–ಉತ್ತಮವಾದ ಚುನಾವಣೆಗಳ ಮೂಲಕ ಸಂಕ್ರಾಂತಿ, ಮಹಾಸಭೆಯಲ್ಲಿ ಅಭಿವೃದ್ಧಿಯ ಕ್ರಾಂತಿಯನ್ನು ಸೃಷ್ಟಿಸಿ ಸಮಾಜದ ಭವ್ಯ ಭವಿಷ್ಯಕ್ಕೆ 2022ರ ಚುನಾವಣೆಗಳು ನಾಂದಿಯಾಗಲೆಂದು ಪ್ರಾರ್ಥಿಸಿ. ನಿರಂತರ ಸುಮಾರು 12 ವರ್ಷಗಳ ಕಾಲ ನಿಮಗೆ ಸೇವೆ ಸಲ್ಲಿಸಲು ಅವಕಾಶ ನೀಡಿರುವ ಕರ್ನಾಟಕ ರಾಜ್ಯದ ಆರ್ಯವೈಶ್ಯ ಬಂಧುಗಳಿಗೆ ನನ್ನ ಎರಡನೇ ಅವಧಿಯ ಕೊನೆಯ ಸಂದೇಶದೊಂದಿಗೆ ನನ್ನ ಹೃದಯಾಂತರಾಳದ ನಮನಗಳನ್ನು ಸಲ್ಲಿಸುತ್ತೇನೆ.

**ಮರೆಯಬೇಡಿ ದಿನಾಂಕ: 6–2–2022, ಭಾನುವಾರ, ಸಮಾಜದ ಅಭಿವೃದ್ಧಿಗೆ ಮುನ್ನುಡಿ ಬರೆಯುವ ನಿಮ್ಮ ಪವಿತ್ರ ಮತ ಚಲಾಯಿಸಲು,**

**ಆರ್ ಪಿ ರವಿಶಂಕರ್**
ಅಧ್ಯಕ್ಷರು

## 11ನೇ ಪ್ರತಿಭೋತ್ಸವ

# ಮಲೆನಾಡ ಮಡಿಲಲ್ಲಿ ವಿಜೃಂಭಿಸಿದ ವಿಧ್ಯಾ ಮಾಣಿಕ್ಯಗಳು



ಪ್ರತಿಭಾ ಶೋಭಾ ಯಾತ್ರೆಯಲ್ಲಿ ಗೌರವಿಸಲ್ಪಟ ವಿಧ್ಯಾಮಾಣಿಕ್ಯಗಳು

**ಶಿ**ವಮೊಗ್ಗ ನಗರದಲ್ಲಿ ನಡೆದ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಪ್ರತಿಭೋತ್ಸವ ಕಾರ್ಯಕ್ರಮ ಭಾಗವಹಿಸಿದ ಎಲ್ಲಾರಿಗೂ ಸಹ ಅವಿಸ್ಮರಣೀಯ ಅನುಭವ ನೀಡಿತು.

ಡಿಸೆಂಬರ್ 26 ರಂದು ನಡೆದ ಕಾರ್ಯಕ್ರಮಕ್ಕೆ 24ರ ಸಂಜೆಯಿಂದಲೇ ವಿದ್ಯಾರ್ಥಿಗಳು, ಪೋಷಕರು, ಹಾಗೂ **ಕರ್ನಾಟಕ ಆರ್ಯವೈಶ್ಯ ಮಹಾಸಭಾದ ನಿರ್ದೇಶಕರುಗಳು** ಬರಲು ಆಗಮಿಸಿದರು, ಡಿಸೆಂಬರ್ 25ರ ರಾತ್ರಿ 8.00 **ಘಂಟೆಯ ಒಳಗೆ ಸ್ಥಳೀಯರು ಸೇರಿಕೊಂಡಂತೆ 1000ಕ್ಕೂ ಹೆಚ್ಚು ಜನ ನಮ್ಮ ದೇವಾಲಯದಲ್ಲಿ ಸೇರಿದರು, ವಿದ್ಯಾರ್ಥಿ ಹಾಗೂ ಪೋಷಕರಿಗೆ** ವಸತಿ ವ್ಯವಸ್ಥೆ ಮತ್ತು ಸಮಾರಂಭದ ಮಾಹಿತಿ ವ್ಯವಸ್ಥೆ ಸಡಗರ ಪ್ರಾರಂಭವಾಗಿತ್ತು. ಇನ್ನೊಂದು ಭಾಗದಲ್ಲಿ ವಾಸವಿ ಶಾಲೆಯಲ್ಲಿ ಸಂಜೆ 4.30 **ದಿಂದಲೇ** ಕಾರ್ಯಕಾರಿ ಸಮಿತಿ ಸಭೆಗೆ ಬರಲು ಆರಂಭಿಸಿದರು. ಅಲ್ಲೊಂದು ಮದುವೆ ಸಮಾರಂಭದಂತೆಯೆ ಎಲ್ಲರೂ ಸಂಭ್ರಮಿಸುತ್ತಿದ್ದರು. ಸಾಮೂಹಿಕ ಮತ್ತು ವೈಯಕ್ತಿಕ ಛಾಯ ಚಿತ್ರಗಳನ್ನು ತೆಗೆಯುವ ಸಂಭ್ರಮ ಅತ್ಯಂತ ಸಂತೋಷದ ವಾತಾವರಣ ನಿರ್ಮಿಸಿತ್ತು. ಡಿಸೆಂಬರ್ 26ರ ಬೆಳಿಗ್ಗೆ 8.00 ಘಂಟೆಗೆ ಸರಿಯಾಗಿ ರಾಜ್ಯದ ಅಧ್ಯಕ್ಷರಾದ ಶ್ರೀ ಆರ್.ಪಿ ರವಿಶಂಕರ್ ರವರು ಹಾಗೂ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರುಗಳು ದೇವಸ್ಥಾನಕ್ಕೆ ಆಗಮಿಸಿ ಸಂಪೂರ್ಣ ಕಾರ್ಯಕ್ರಮದ ಯಶಸ್ವಿಯಾಗಿ ದೇವತಾಪೂಜೆ ನಡೆಸುವುದರ ಮೂಲಕ ಚಾಲನೆಯನ್ನು ನೀಡಲಾಯಿತು.

ಇಲ್ಲಿ ಸೇರಿದ ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರು ಎಲ್ಲಾರೂ ವಾದ್ಯದ ಮುಖಾಂತರ ತೆರಳಿ ಅವರಿಗಾಗಿ ವ್ಯವಸ್ಥೆ ಮಾಡಿದ 15 ಬಸ್ ಹಾಗೂ ಇತರ ವಾಹನಗಳಲ್ಲಿ ಸಮಾರಂಭ ನಡೆಯುವ ಪ್ರೇರಣಾ ಸಭಾಂಗಣಕ್ಕೆ ತೆರಳಿದರು. ಅಲ್ಲಿ ಉಪಹಾರದ ನಂತರ ವಿದ್ಯಾರ್ಥಿಗಳು ತಮ್ಮ ಬ್ಯಾಡ್ಜ್‌ನ್ನು ಪಡೆದು, ಅಲ್ಲೇ ಹತ್ತಿರದಲ್ಲಿದ್ದ ಮೆರವಣಿಗೆಯ ಮೈದಾನಕ್ಕೆ ತಲುಪಿದರು. ಅಲ್ಲಿ ಮಾಡಲಾದ ವ್ಯವಸ್ಥೆ ನಮ್ಮ ಬಾಲ್ಯದ ಸ್ವಾತಂತ್ರ್ಯ ದಿನಾಚರಣೆ ನೋಡಿದ ರೂಪದಲ್ಲಿತ್ತು. ಎಲ್ಲಾ ಊರುಗಳಿಂದ ಬಂದ ಜನರು, ನದಿಯಂತೆ ಹರಿದು ಸಂಗಮದಲ್ಲಿ ಪುಣ್ಯಸ್ನಾನ ಮಾಡಿದ ಭಾವನೆ ಮೂಡಿಸಿತು, ಕೋವಿಡ್ ಕಾರಣಕ್ಕಾಗಿ ಮೆರವಣಿಗೆ ಸ್ಥಳ **ಬದಲಾವಣೆಯಾಯಿತು.**

ಅದೇ ಒಳ್ಳೆಯದು ಆಯಿತು ಎಂಬ ಮಾತುಗಳು ಅಲ್ಲಲ್ಲಿ ಕೇಳಿ ಬರುತ್ತಿತ್ತು. ಅಲ್ಲಿಂದ ಸಭಾ ಭವನಕ್ಕೆ ವಿದ್ಯಾರ್ಥಿಗಳು ಸಾರೋಟ್, ಮಲೆನಾಡಿನ ಎತ್ತಿನ ಗಾಡಿ, ಕುದುರೆ ಗಾಡಿ, ಟ್ರ್ಯಾಕ್ಟರ್‌ಗಳಲ್ಲಿ ಪ್ರತಿಭಾ ವಿದ್ಯಾರ್ಥಿಗಳ ಸಂಚಲನದ ಸಂಭ್ರಮ ವಿಶಿಷ್ಟವಾದ ವಾತಾವರಣವನ್ನು ಮೂಡಿಸಿತ್ತು. ಇದರ ಜೊತೆಯಲ್ಲಿ ಮಹಿಳೆಯರ ಡೊಳ್ಳು, ವೀರಗಾಸೆ, ನಾದ ಸ್ವರದ ವಾದ್ಯಗಳು ಇಡೀ ಮೈದಾನವನ್ನೇ ಕುಣಿಯುವಂತೆ ಮಾಡಿತ್ತು, ವಾಸವಿ ಶಾಲಾ ಮಕ್ಕಳ ಘೋಷ ಎಲ್ಲರನ್ನೂ ಆಕರ್ಷಣೆಗೆ ಒಳಪಡಿಸಿತ್ತು, ಆಕಾಶದಲ್ಲಿ ಹಾರಾಡಿದ **ಬಲುನುಗಳು** ಎಲ್ಲ **ಸಂತಸ** ಮುಗಿಲು ಮುಟ್ಟಿಸಿತ್ತು. ಅಲ್ಲಿಂದ ವೈದ್ಯಕೀಯ ವಿಭಾಗದ ಸ್ಯಾನಿಟೇಜರ್ ಮತ್ತು ಕೋವಿಡ್ ಟೆಂಪರೇಚರ್ ಟೆಸ್ಟ್ ಗೆ ಒಳಪಡಿಸಿ ಸಭಾಂಗಣಕ್ಕೆ ಪ್ರವೇಶ ನೀಡಲಾಯಿತು. ಅದ್ದೂರಿ ಸಭಾಂಗಣ ವೈಭವದ ವೇದಿಕೆಗೆ ಪ್ರತಿಭಾ ವಿದ್ಯಾರ್ಥಿಗಳಿಗೆ ವೇದಿಕೆಯ ಮೇಲೆ ವಿಶಿಷ್ಠವಾದ ಹಾಸನಗಳು ಒಳಗೆ ಬರುತ್ತಿದ್ದಂತೆಯೆ ಕಾರ್ಯಕ್ರಮದಲ್ಲಿ ಯಶಸ್ಸನ್ನು ಸೂಚಿಸುತ್ತಿತ್ತು. ಎಲ್ಲರ ಮಾತಿನಲ್ಲಿಯೂ ಸಂಭ್ರಮವನ್ನು ತರಿಸಿತ್ತು. ಅಚ್ಚುಕಟ್ಟಾದ ಉದ್ಘಾಟನೆ ವೇದಿಕೆಯ ಮೇಲೆ ಗೊಂದಲವಿಲ್ಲದ ವಾತಾವರಣ ಕೆಲವೇ ಭಾಷಣಗಳು ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕೆ ಹೆಚ್ಚು ಹೆಚ್ಚು ಅವಕಾಶ ದೊರಕಿಸಿತು.

ವೇದಿಕೆಯ ಮೇಲೆ ತಾವು ತೆಗೆಸಿಕೊಂಡ ಛಾಯಚಿತ್ರಗಳು ಅದರ ಪ್ರತಿಗಳನ್ನು ಪಡೆಯುವ ವ್ಯವಸ್ಥೆ ವೇದಿಕೆಯ ಮುಂಭಾಗದ ಸ್ಥಳದಲ್ಲಿ ದೊರೆಯುವಂತೆ ಮಾಡಲಾಯಿತು. ಇದು ವಿದ್ಯಾರ್ಥಿಗಳ ಸಂತಸಕ್ಕೆ ಮತ್ತೊಂದು ಅವಕಾಕ ಮಾಡಿ ಕೊಟ್ಟಿತು.

36 ಬ್ಯಾಚ್‌ಗಳಲ್ಲಿ ನಡೆದ ಪ್ರತಿಭಾ ಪುರಸ್ಕಾರದ ಮಧ್ಯೆ ಅನೇಕ ವಿದ್ಯಾರ್ಥಿಗಳು ಮತ್ತು ಅತಿಥಿಗಳು ತಮ್ಮ ಮಾತುಗಳನ್ನು ಆಡಲು ಅವಕಾಶ ನೀಡಲಾಗಿತ್ತು. 11 ಘಂಟೆಗೆ ಪ್ರಾರಂಭವಾದ ಈ ಸಮಾರಂಭ 2 ಘಂಟೆಗೆ ಮುಕ್ತಾಯಗೊಳಿಸಲಾಯಿತು.

ವೇದಿಕೆಯ ಮೇಲೆ ಓಡಾದುತ್ತಿದ್ದ ಯುವತಿಯರು ಹಾಗೂ ಉತ್ತಮ ಧ್ವನಿಯನ್ನು ನೀಡುತ್ತಿದ್ದ ನಿರೂಪಕಿಯರುಗಳೂ ಸಭೆಗೆ ಶೋಭೆಯನ್ನು ತಂದರು. ಊಟದ ನಂತರ ನಡೆದ ಇನ್ನೂರಕ್ಕೂ ಹೆಚ್ಚು ಕಾರ್ಯಕರ್ತರಿಗೆ ಅಭಿನಂದನೆ ಹಾಗೂ ನಂತರ ನಡೆದ ಸರ್ವಸದಸ್ಯರ ಸಭೆ ಮತ್ತು ಸಂಜೆ ನಡೆದ ಶಿವಮೊಗ್ಗ ನಗರದ ಆರ್ಯವೈಶ್ಯ ಪ್ರತಿಭೆಗಳ ಸಾಂಸ್ಕೃತಿಕ ವೈಭವ ಎಲ್ಲರ ಮನಸ್ಸಿಗೂ ಸಂತೋಷನ್ನು ನೀಡಿತ್ತು.

ನಮ್ಮ ಕಾರ್ಯಕರ್ತರುಗಳೂ 100ಕ್ಕೂ ಹೆಚ್ಚು ಜನರ ಅಭಿಪ್ರಾಯಗಳನ್ನು ಪಡೆದು ಪ್ರಶಂಸನೀಯ ಮಹಾಪೂರವೆ ಹರಿದು ಬಂದಿದೆ. ವಸತಿಯಲ್ಲಿ ಆಗಲಿ, ಊಟದಲ್ಲಿ ಆಗಲಿ, ಸಮಾರಂಭದಲ್ಲಿ ಆಗಲಿ ಸಣ್ಣ ತಪ್ಪುಗಳಿಗೂ ಅವಕಾಶವಿಲ್ಲದಂತೆ ಶ್ರಮವಹಿಸಿ ದುಡಿದ ಕಾರ್ಯಕರ್ತರ ಫಲವೇ ಸಮಾರಂಭದ ಯಶಸ್ಸಿಗೆ ಕಾರಣ ಎಂದು ನನಗನ್ನಿಸುತ್ತದೆ. ಶ್ರೀ ಡಿ.ಹೆಚ್ ಶಂಕರಮೂರ್ತಿಯವರ ವೇದಿಕೆ ಹಾಗೂ ಭೂಪಾಲಂ ಆರ್. ನಂಜುಂಡಯ್ಯ ಮಹಾದ್ವಾರ ಶಿವಮೊಗ್ಗ ನಗರಕ್ಕೆ 100 ವರ್ಷಗಳಿಗೂ ಹೆಚ್ಚು ಅವರ ಎಲ್ಲಾ ಕುಟುಂಬ ವರ್ಗದವರ ಕಾರ್ಯಕ್ಕೆ ನಾವು ನೀಡಿದ ಸಣ್ಣ ಕೊಡುಗೆ ಎಂದು ಭಾವಿಸುತ್ತೇನೆ. ಸಭಾಂಗಣದ ಹೊರ ಭಾಗದಲ್ಲಿ ಇದ್ದ ಅನೇಕ ಮಳಿಗೆಗಳು ಬಂದವರಿಗೆ ಆತಿಥ್ಯ ನೀಡುವ ಮಳಿಗೆಗಳಾಗಿ ಮತ್ತು ಮಾಹಿತಿ ನೀಡುವ ಕೇಂದ್ರವಾಗಿತ್ತು. ಸಮಾರಂಭದ ಯಶಸ್ಸಿನ ಪಾಲಿನಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಹಾಗೂ ಸಿಬ್ಬಂದಿಯ ವರ್ಗ ಕಾರ್ಯದಕ್ಷತೆ ಮೆಚ್ಚುವಂತಹುದು





11ನೇ ಪ್ರತಿಭೋತ್ಸವ ಉದ್ಘಾಟಿಸಿದ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಸಚಿವರಾದ ಶ್ರೀ ಕೆ ಎಸ್ ಈಶ್ವರಪ್ಪ , ಮಾಜಿಸಭಾಪತಿಗಳಾದ ಶ್ರೀ ಡಿ ಹೆಚ್ ಶಂಕರಮೂರ್ತಿ ಹಾಗೂ ಇತರರು





ಪ್ರತಿಭೋತ್ಸವ ವೇದಿಕೆಯಲ್ಲಿ ಮುಖ್ಯ ಅಥಿತಿಗಳೊಂದಿಗೆ ವಿರಾಜಮಾನರಾಗಿರುವ ವಿದ್ಯಾರ್ಥಿಗಳು

ಸಮಾರಂಭದ ಯಶಸ್ಸಿನಲ್ಲಿ ಯಾರ ಹೆಸರನ್ನು ನೆನಪಿಸಕೊಳ್ಳಲು ಹೋದರು ಕನಿಷ್ಠ 100 ಕ್ಕೂ ಹೆಚ್ಚು ಹೆಸರುಗಳು ನೆನಪಾಗುತ್ತದೆ. ಯಾರನ್ನೂ ಹೆಸರಿಸಿ ಮತ್ತೊಬ್ಬ ಕಾರ್ಯಕರ್ತರಿಗೆ ನೋವು ಆಗಬಹುದು ಎಂದು ಅಂಜಿಕೆ ಇದೆ. ಆದರೂ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಡಿ. ಎಸ್ ಅರುಣ್ ಪ್ರತಿಭಾಪುರಸ್ಕಾರದ ಛೇರ್ಮನ್‌ರಾದ ಭೂಪಾಲಂ ಎಸ್ ಶಶಿಧರ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್.ಕೆ ಶೇಷಾಚಲ ಇವರ ಮಾರ್ಗದರ್ಶನ ನಿರಂತರವಾಗಿ ನನ್ನ ಮನಸ್ಸಿನಲ್ಲಿ ಉಳಿಯುತ್ತದೆ. ಎಲ್ಲರಲ್ಲಿಯೂ ಮೂಡಿ ಬಂದ ಮಾತು ವಸತಿ, ಮೆರವಣಿಗೆ, ವೇದಿಕೆ, ಕಾರ್ಯಕ್ರಮ, ಊಟ-ಉಪಹಾರ, ಮಳಿಗೆಗಳ ವ್ಯವಸ್ಥೆ, ವೈದ್ಯಕೀಯ ಸೇವೆ, ನೊಂದಣಿ ವಿಭಾಗ, ಛಾಯಚಿತ್ರ ವಿಭಾಗ, ರಕ್ಷಣಾ ಮತ್ತು ಸಾಂಸ್ಕೃತಿಕ ವಿಭಾಗ.. ಎಲ್ಲವೂ ಚೆನ್ನಾಗಿತ್ತು.

ಶಿವಮೊಗ್ಗದಿಂದ ಹೊರಡುವ ಮುನ್ನ ಹೃದಯ ತುಂಬಿ ಬಂದ ಎಲ್ಲರ ಮಾತುಗಳು ನಮ್ಮ ಕಾರ್ಯಕರ್ತರಿಗೆ ಸಿಕ್ಕ ದೊಡ್ಡ ಪ್ರಶಸ್ತಿ.

### ಭಾಗವಹಿಸಿದ ಗಣ್ಯರು:


ವಿಧಾನಪರಿಷತ್ತಿನ ಮಾಜಿ ಸಭಾಪತಿ ಶ್ರೀ ಡಿ.ಹೆಚ್ ಶಂಕರಮೂರ್ತಿ, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಕೆ.ಎಸ್ ಈಶ್ವರಪ್ಪರ, ವಿಧಾನ ಸಭೆಯ ಶಾಸಕರಾದ ಶ್ರೀ ಹೆಚ್.ಪಿ ಮಂಜುನಾಥ್, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರುದ್ರೇಗೌಡರು, ಶಿವಮೊಗ್ಗ ಜಿಲ್ಲೆಯ ಮಹಾನಗರ ಪಾಲಿಕೆಯ ಆಡಳಿತ ಪಕ್ಷದ ಶ್ರೀ ಎಸ್.ಎನ್ ಚೆನ್ನ ಬಸಪ್ಪ, ರಾಷ್ಟ್ರೀಯ ಸ್ವಯಂ ಸೇವಕ ಸಂಘ ರಾಜ್ಯ ಬೌದ್ಧಿಕ ಪ್ರಮುಖ್ ಶ್ರೀ ದಿನೇಶ್ ಪೈ, ಪೆಸಿಟ್ ಕಾಲೇಜಿನ ಆಡಳಿತ ನಿರ್ದೇಶಕರಾದ ಶ್ರೀ ನಾಗರಾಜರವರು, ಕುವೆಂಪು ವಿಶ್ವವಿದ್ಯಾನಿಲಯದ ಶ್ರೀ ವೆಂಕಟೇಶ್ವರಲು, ರಾಷ್ಟ್ರಿಯ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಟಿ.ಆರ್ ಅಶ್ವತ್ಥನಾರಾಯಣ, ರಾಜ್ಯ ರಾಷ್ಟ್ರ ಪ್ರಶಸ್ತಿಪುರಸ್ಕೃತ ವಿಜೇತ ಶಿವಮೊಗ್ಗ ಕಲಾಸಿಂಧೂರ ಶ್ರೀ ರಾಜೇಶ್, ಮಹಾಸಭೆಯ 60ಕ್ಕೂ ಹೆಚ್ಚು ನಿರ್ದೇಶಕರು, ಹಾಗೂ 1000ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳು, ಸಾವಿರಕ್ಕೂ ಹೆಚ್ಚು ಪೋಷಕರುಗಳು, 1000ಕ್ಕೂ ಹೆಚ್ಚು ಶಿವಮೊಗ್ಗ ಜನಾಂಗ ಬಾಂಧವರುಗಳು, 200ಕ್ಕೂ ಹೆಚ್ಚೂ ಕಾರ್ಯಕರ್ತರುಗಳು, ವಾಸವಿ ಶಾಲೆ, ಆರ್ಯವೈಶ್ಯ ಮಹಾಜನ ಸಮಿತಿ, ಮಹಾಸಭೆಯ ಸಿಬ್ಬಂದಿ ವರ್ಗದವರು, ಹಾಗೂ ಪ್ರೇರಣಾ ಸಭಾಂಗಣದ ಎಲ್ಲಾ ಸಿಬ್ಬಂದಿಗಳು ಮತ್ತು ಭೋದಕ ವರ್ಗದವರು.

ವರದಿ
ಶ್ರೀಮತಿ R ಸೌಮ್ಯ ರವಿ



## ಅಭಿನಂದನೆಗಳು

### Ph D ಪ್ರಧಾನ



ಡಾ॥ R R ಸೌಮ್ಯ

ಶ್ರೀಮತಿ R R ಸೌಮ್ಯರವರು ಬೆಂಗಳೂರು ಪ್ರತಿಷ್ಟಿತ ಕ್ರೈಸ್ಟ್ ವಿಶ್ವವಿದ್ಯಾಲಯದಲ್ಲಿ Master Degree ಯನ್ನು ಪಡೆದು ತನ್ನ Proffessior ಆಗಿದ್ದ ಡಾ॥ ಅನುರಾಧರವರ ಮಾರ್ಗದರ್ಶನದಲ್ಲಿ ರಾಜಸ್ಥಾನ ರಾಜ್ಯದ ಕೋಟದಲ್ಲಿರುವ Carrier Point University ಯಲ್ಲಿ **Ph D** ಪದವಿಗಾಗಿ ನೋಂದಣಿ ಮಾಡಿಕೊಂಡಿದ್ದು "Glass ceiling Experience of women managers in India" ಎಂಬ ವಿಷಯದ ಬಗ್ಗೆ ಮಹಾ ಪ್ರಭಂದವನ್ನು 2020 ಆಗಸ್ಟ್ ತಿಂಗಳಿನಲ್ಲಿ ಮಂಡಿಸಿದ್ದರು. ದಿ. 10-1-2022 ರಲ್ಲಿ ನಡೆದ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ Ph D ಪದವಿಗೆ ಭಾಜನರಾಗಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತದೆ.

ಶ್ರೀಮತಿ R R ಸೌಮ್ಯ ಮಹಾಸಭೆಯ **ಅಧ್ಯಕ್ಷರಾದ** ಶ್ರೀ R P ರವಿಶಂಕರ್‌ರವರ ಜೇಷ್ಠ ಪುತ್ರಿಯು ಆಗಿರುತ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ಹೊಸ ಸಾಧನೆ ಮಾಡಬೇಕೆಂಬ ಇವರ ಕನಸು ನನಸಾಗಿ ಇವರ ಮೂಲಕ ಸಹಸ್ರಾರು ಸುಸಂಸ್ಕೃತ ವಿದ್ಯಾರ್ಥಿಗಳು ದೇಶದ ಪ್ರಗತಿಗೆ ಮೂಡಿಬರಲೆಂದು ಹಾರೈಸಿ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಭಿನಂದಿಸುತ್ತದೆ.



ಡಾ॥ ರಮ್ಯಾ

**ಹಾ**ಸನ ಜಿಲ್ಲೆಯ ಚೆನ್ನರಾಯಪಟ್ಟಣದ ಡಾ॥ ರಮೇಶ್ ಹಾಗೂ ಶ್ರೀಮತಿ. ತಾರಾರವರ ಸುಪುತ್ರಿಯಾಗಿ ಬಾಲ್ಯದಿಂದಲೇ ಸಾಹಿತ್ಯ ಲೋಕದ ಶುಕ್ಲ ಪಕ್ಷದ ಚಂದ್ರನಂತೆ ಬೆಳೆಯುತ್ತಾ ಬಂದ ಶ್ರೀಮತಿ ರಮ್ಯ ಇಂದು ಡಾ॥ ರಮ್ಯಾ ಆಗಿ ಸಾಂಸ್ಕೃತಿಕ ಲೋಕದ ಮಿನುಗುತಾರೆಯಾಗಿರುತ್ತಾರೆ. ದಕ್ಷಿಣ ಭಾರತದ ಸಂಗೀತ ಮತ್ತು ನೃತ್ಯ 1750-1950ರ ವರೆಗೂ ಅಂದರೆ ಸುಮಾರು 200ವರ್ಷಗಳ ಕಾಲ ಬೆಳೆದು ಬಂದ ಬಗ್ಗೆ ಡಾ॥ ಎನ್ ಗಿರೀಶ್ ಕುಮಾರ್‌ರವರ ಮಾರ್ಗದರ್ಶನದಲ್ಲಿ ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಮಂಡಿಸಿದ ಮಹಾ ಪ್ರಭಂದಕ್ಕೆ ದಿ: 6-01-2022 ರಂದು **Ph D** ಪದವಿಗೆ ಭಾಜನರಾಗಿರುತ್ತಾರೆ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ಡಾ॥ ರಮ್ಯಾರವರ ಈ ಸಾಧನೆಯನ್ನು ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಭಿನಂದಿಸುತ್ತದೆ

## ಅನುಬಂಧ: 1

### ಡಿಸೆಂಬರ್ 21 ರ ವಾರ್ತಾ ಪತ್ರಿಕೆಯಲ್ಲಿನ ಚುನಾವಣಾ ಮಾಹಿತಿಗಳಲ್ಲಿನ ತಿದ್ದುಪಡಿ/ಮಾರ್ಪಾಡುಗಳು

| ಅಕ್ರ.ಸ. | ಜಿಲ್ಲೆಯ ಹೆಸರು | ಜಿಲ್ಲಾ ಕೋಆರ್ಡಿನೇಟರ್‌ಗಳ ಹೆಸರು ಮೊಬೈಲ್ ಸಂಖ್ಯೆ | ನಿಗದಿಪಡಿಸಿದ ಸ್ಥಳ |
|---|---|---|---|
| 1 | ಬಾಗಲಕೋಟೆ | ಶ್ರೀ ಸಚಿನ್.ಎಸ್ ಮೊ. 9060962766 | ವಿಜಾಪುರ ಅಂಡ್ ಕಂಪೆನಿ ಚಾರ್ಟೆಡ್ ಅಕೌಂಟೆಂಟ್ 1ನೇ ಮಹಡಿ, ಶ್ರೀ ಕಾಂತೇಶ್ ಏಜೆನ್ಸಿ ಬಸವೇಶ್ವರ ಬ್ಯಾಂಕ್ ರಸ್ತೆ, ಹಳೇ ಅದಾತ್ ಬಜಾರ್, ಬಾಗಲಕೋಟೆ-587101 |
| 2 | ಚಾಮರಾಜನಗರ | ಶ್ರೀ ಮಹೇಶ್ ಮೊ.7204629892 | ವಾಸವಿ ವಿದ್ಯಾ ಕೇಂದ್ರ, ಕೊಳ್ಳೇಗಾಲ |
| 3 | ಕೊಪ್ಪಳ | ಶ್ರೀ ಮಲ್ಲಿಕಾರ್ಜುನ ಜಾನಕೇಲ ಮೊ. 9008074598 | ಶ್ರೀ ವಾಸವಿ ಕಲ್ಯಾಣಮಂಟಪ, ಸತ್ಯನಾರಾಯಣ ಬಡಾವಣೆ, ಕಿನ್ನಾಳ್ ರೈಲ್ವೆ ಗೇಟ್ ಹತ್ತಿರ, ಕೊಪ್ಪಳ-583231 |
| 4 | ತುಮಕೂರು | ಶ್ರೀ ರಮೇಶ್ ಬಾಬು ಆರ್.ಎಲ್ ಮೊ. 9844011192 | ಶ್ರೀ ಭಗವಾನ್ ರೈಸ್ ಇಂಡಸ್ಟ್ರಿ ಜಿ-5 ವಿಪ್ರೊ ಲಿ., ಹಿಂಭಾಗ ಅಂತರಾಸನಹಳ್ಳಿ ಇಂಡಸ್ಟ್ರಿಯಲ್ ಏರಿಯಾ ತುಮಕೂರು 572103 |
| 5 | ಹಾಸನ | ಶ್ರೀ ಹನುಮಂತರಾಜು 9916694936 | ಮ್ಯಾನೇಜರ್ ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್.ಲಿ ಹಾಸನ |
| **ಅನುಬಂಧ: 2** | | | |
| 6 | ಚಾಮರಾಜನಗರ | ಕೊಳ್ಳೇಗಾಲ | ಕೊಳ್ಳೇಗಾಲ:- ವಾಸವಿ 1st ಗ್ರೇಡ್ ಕಾಲೇಜು ಕೊಳ್ಳೇಗಾಲ |
| 7 | ಕಲ್ಬುರ್ಗಿ | ಕಲ್ಬುರ್ಗಿ | ಸೇಡಂ:- ಶ್ರೀ ಕನ್ಯಕಾ ಪರಮೇಶ್ವರಿ ದೇವಾಲಯ ವಾಸವಿ ಕಲ್ಯಾಣ ಮಂಟಪ ಸೇಡಂ , ಕಲ್ಬುರ್ಗಿ |
| 8 | ರಾಯಚೂರು | ಮಾನ್ವಿ | ಮಾನ್ವಿ:- ಶ್ರೀ ಪಂಪ ವಿರೂಪಾಕ್ಷೇಶ್ವರ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ ಕಲ್ಮಠ ಮಾನ್ವಿ. ಪಂಪ ಹೌಸಿಂಗ್ ಕಾಲೋನಿ ಮಾನವಿ ಜಿಲ್ಲಾ ರಾಯಚೂರ್ |
| 9 | ತುಮಕೂರು | ಪಾವಗಡ | ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ, ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ರಸ್ತೆ, ಪಾವಗಡ |

## 6.2.2022

# ಮಹಾಸಭಾ ಮತದಾರರು ಮತ ಚಲಾಯಿಸಲು ಮತಗಟ್ಟೆಗಳ ಮಾಹಿತಿ

| ಸಂಖ್ಯೆ | ಜಿಲ್ಲೆ | ಚುನಾವಣೆ ಮತಗಟ್ಟೆಯ ಸ್ಥಳ ಮತ್ತು ವಿಳಾಸ | ಈ ಮತಗಟ್ಟೆಗೆ ಸೇರಿದ ಸ್ಥಳಗಳು |
|---|---|---|---|
| 1 | ಬಾಗಲಕೋಟೆ | > **ಬಾದಾಮಿ:**– ವಿಶ್ವಜಿತು ಯುವಕ ಸಂಘ, ನಗರವಾನ್, ಬಾದಾಮಿ<br>> **ಬಾಗಲಕೋಟೆ:**– ಶ್ರೀ ವಾಸವಿ ಪೂರ್ವ ಪ್ರಾಥಮಿಕ ಶಾಲೆ, ಅರೈಪೆಟ್ರೋಲ್ ಬಂಕ್ ಎದುರಿಗೆ, ವಿದ್ಯಾಗಿರಿ, ಬಾಗಲಕೋಟೆ | **ಬಾದಾಮಿ:**– ಬಾದಾಮಿ ತಾಲ್ಲೂಕು, **ಬಾಗಲಕೋಟೆ**– ಬಾಗಲಕೋಟೆ ತಾಲ್ಲೂಕು, ಹುನಗುಂದ ತಾಲ್ಲೂಕು, ಮುಧೋಳ |
| 2 | ಬೆಂಗಳೂರು ಗ್ರಾಮಾಂತರ | > **ದೊಡ್ಡಬಳ್ಳಾಪುರ:**– ಆರ್ಯವೈಶ್ಯ ಮಂಡಳಿ, ವಾಸವಿ ಕಲ್ಯಾಣ ಮಂದಿರ, ಮುಖ್ಯರಸ್ತೆ, ದೊಡ್ಡಬಳ್ಳಾಪುರ<br>> **ನೆಲಮಂಗಲ**– ಗೀತಾ ಮಂದಿರ ನೆಲಮಂಗಲ > **ತ್ಯಾಮಗೊಂಡ್ಲು:**–ವಾಸವಿ ಕಲ್ಯಾಣಮಂಟಪ, ತ್ಯಾಮಗೊಂಡ್ಲು | **ದೊಡ್ಡಬಳ್ಳಾಪುರ:**– ದೊಡ್ಡಬಳ್ಳಾಪುರ ತಾಲ್ಲೂಕು, ಹೊಸಕೋಟೆ ತಾಲ್ಲೂಕು, ದೇವನಹಳ್ಳಿ **ನೆಲಮಂಗಲ**– ನೆಲಮಂಗಲ ತಾಲ್ಲೂಕು, ಮಾದವರ, ದಾಸನಾಪುರ, ಅರಿಶಿಣಕುಂಟೆ, **ತ್ಯಾಮಗೊಂಡ್ಲು:**– ತ್ಯಾಮಗೊಂಡ್ಲು, ದಾಬಸ್‌ಪೇಟೆ, ಶಿವಗಂಗೆ, ಸೋಂಪುರ, |
| 3 | ಬಳ್ಳಾರಿ | > **ಬಳ್ಳಾರಿ:**–ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಆವರಣ, ಬಳ್ಳಾರಿ > **ಸಂಡೂರು:**– ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಆವರಣ, ಸಂಡೂರು > **ಸಿರಗುಪ್ಪ:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ಸಿರಗುಪ್ಪ > **ಕಂಪ್ಲಿ –** ವಾಸವಿ ವಿದ್ಯಾಸಂಸ್ಥೆ, ಪೋಲಿಸ್ ಸ್ಟೇಷನ್ ಹತ್ತಿರ, ಕಂಪ್ಲಿ > **ಸಿರಿಗೆರೆ** ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ಸಿರಗೆರೆ | **ಬಳ್ಳಾರಿ:**– ಬಳ್ಳಾರಿ ತಾಲ್ಲೂಕು, **ಸಂಡೂರು:**– ಸಂಡೂರು ತಾಲ್ಲೂಕು, **ಸಿರಗುಪ್ಪ:**– ಸಿರಗುಪ್ಪ ತಾಲ್ಲೂಕು, **ಕಂಪ್ಲಿ:**– ಕಂಪ್ಲಿ ತಾಲ್ಲೂಕು, **ಸಿರಿಗೆರೆ;**– ( ಸಿರಿಗೆರೆ ತೆಕ್ಕಲಕೋಟೆ ದರೂರು ದೇಶನೂರು) |
| 4 | ಬೀದರ್ | > **ಬೀದರ್:–** ಆರ್ಯವೈಶ್ಯ ಮಂಡಳಿ ಪಾಂಡುರಂಗ ಮಂದಿರ, ಚೌಬಾರ್ ಹತ್ತಿರ, ಬೀದರ್ | **ಬೀದರ್ ಜಿಲ್ಲೆ** |
| 5 | ಚಾಮರಾಜನಗರ | > **ಕೊಳ್ಳೇಗಾಲ:**– ಕೊಳ್ಳೇಗಾಲ:– ವಾಸವಿ 1ⁿ ಗ್ರೇಡ್ ಕಾಲೇಜು ಕೊಳ್ಳೇಗಾಲ | **ಚಾಮರಾಜನಗರ ಜಿಲ್ಲೆ** |
| 7 | ಚಿಕ್ಕಮಗಳೂರು | > **ಚಿಕ್ಕಮಗಳೂರು:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ಎಂ.ಜಿ.ರೋಡ್, ಚಿಕ್ಕಮಗಳೂರು"<br>> **ಕಡೂರು:**– ಆರ್ಯವೈಶ್ಯ ಸಂಘ, ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ, ಶ್ರೀ ವಾಸವಿ ದೇವಾಲಯದ ರಸ್ತೆ, ಕಡೂರು<br>> **ಬೀರೂರು:**– ಆರ್ಯವೈಶ್ಯ ಮಂಡಳಿ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ, ಬೀರೂರು | **ಚಿಕ್ಕಮಗಳೂರು:**– ಚಿಕ್ಕಮಗಳೂರು ತಾಲ್ಲೂಕು, ಕೊಪ್ಪ, ನರಸಿಂಹರಾಜಪುರ, ಶೃಂಗೇರಿ ತಾಲ್ಲೂಕು,<br>**ಕಡೂರು;**– ಕಡೂರು ತಾಲ್ಲೂಕು, **ಬೀರೂರು:**– ಬೀರೂರು **ಹಾಗೂ** ತರೀಕೆರೆ ತಾಲ್ಲೂಕು, |
| 8 | ಚಿಕ್ಕಬಳ್ಳಾಪುರ | > **ಚಿಕ್ಕಬಳ್ಳಾಪುರ:**– ಆರ್ಯವೈಶ್ಯ ಭಜನಾ ಮಂದಿರ, ಡಾ॥ ಸರ್.ಎಮ್. ವಿಶೇಶ್ವರಯ್ಯ ರಸ್ತೆ, ಚಿಕ್ಕಬಳ್ಳಾಪುರ > **ಬಾಗೇಪಲ್ಲಿ:**– ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಆವರಣ, > **ಚಿಂತಾಮಣಿ:**– ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಆವರಣ, ಹಳೇ ಪೇಟೆ, ಚಿಂತಾಮಣಿ > **ಗೌರಿಬಿದನೂರು:**– ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಆವರಣ, ಗೌರಿಬಿದನೂರು" | **ಚಿಕ್ಕಬಳ್ಳಾಪುರ:**– ಚಿಕ್ಕಬಳ್ಳಾಪುರ **ಹಾಗೂ** ಶಿಡ್ಲಘಟ್ಟ ತಾಲ್ಲೂಕು, **ಬಾಗೇಪಲ್ಲಿ :**– ಬಾಗೇಪಲ್ಲಿ **ಹಾಗೂ** ಗುಡಿಬಂಡೆ ತಾಲ್ಲೂಕು, **ಚಿಂತಾಮಣಿ:**– ಚಿಂತಾಮಣಿ ತಾಲ್ಲೂಕು, **ಗೌರಿಬಿದನೂರು:**– ಗೌರಿಬಿದನೂರು ತಾಲ್ಲೂಕು, |
| 9 | ಚಿತ್ರದುರ್ಗ | > **ಚಿತ್ರದುರ್ಗ:**– ಶ್ರೀ ವಾಸವಿ ವಿದ್ಯಾಸಂಸ್ಥೆ, ಹಳೇ ಸೋಪಿನ ಮಾರ್ಕೆಟ್, ತ್ಯಾಗರಾಜ ರಸ್ತೆ, ಚಿತ್ರದುರ್ಗ ಮುಂಬಾಗ, ಚಿತ್ರದುರ್ಗ<br>> **ಚಳ್ಳಕೆರೆ:**– ವಾಸವಿ ಮಹಲ್, ಬೆಂಗಳೂರು ರಸ್ತೆ, ಚಳ್ಳಕೆರೆ > **ಹಿರಿಯೂರು:**–ಹಿರಿಯೂರು ಶ್ರೀ ವಾಗ್ದೇವಿ ಎಜುಕೇಷನ್ ಅಸೋಸಿಯೇಷನ್ ಲಕ್ಕಾವ್ವನಹಳ್ಳಿ ರಸ್ತೆ ಹಿರಿಯೂರು | **ಚಿತ್ರದುರ್ಗ:**– ಚಿತ್ರದುರ್ಗ **ಹಾಗೂ** ಹೊಳಲ್ಕೆರೆ ತಾಲ್ಲೂಕು, **ಚಳ್ಳಕೆರೆ:**– ಚಳ್ಳಕೆರೆ ತಾಲ್ಲೂಕು, **ಹಾಗೂ** ಮೊಳಕಾಲ್ಮೂರು<br>**ಹಿರಿಯೂರು:**_ ಹಿರಿಯೂರು **ಹಾಗೂ** ಹೊಸದುರ್ಗ ತಾಲ್ಲೂಕು, |
| 10 | ದಾವಣಗೆರೆ | > **ದಾವಣಗೆರೆ:**– ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನ ಡೈಮಂಡ್ ಜ್ಯೂಬ್ಲಿ ವಿದ್ಯಾಪೀಠ ಅವರಣ, (ಎ.ಜಿ.ಬಿ.ಕಾಲೇಜ್ ಮತ್ತು ಕೆವಿಎಸ್ ಶಾಲೆ ಆವರಣ) ವನಿತಾಸಮಾಜದ ಎದುರು, ಪಿ.ಜೆ.ಬಡಾವಣೆ, ದಾವಣಗೆರೆ–02 > **ಹರಿಹರ:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ರಥ ಬೀದಿ, ಹರಿಹರ | **ದಾವಣಗೆರೆ:**– ದಾವಣಗೆರೆ **ಹಾಗೂ** ಚೆನ್ನಗಿರಿ ತಾಲ್ಲೂಕು, ಜಗಳೂರು, **ಹರಿಹರ:**– ಹರಿಹರ ತಾಲ್ಲೂಕು, ಹೊನ್ನಾಳಿ, |
| 11 | ಧಾರವಾಡ | > **ಹುಬ್ಬಳ್ಳಿ:**– ನಗರೇಶ್ವರ ದೇವಸ್ಥಾನ, ವಾಸವಿ ಬೀದಿ ಹುಬ್ಬಳ್ಳಿ > **ನವಲಗುಂದ:**– ನಗರೇಶ್ವರ ದೇವಸ್ಥಾನ, ನವಲಗುಂದ | **ಹುಬ್ಬಳ್ಳಿ:**– ಹುಬ್ಬಳ್ಳಿ, ಧಾರವಾಡ, ಕುಂದುಗೋಳ, ಕಲಘಟಗಿ ತಾಲ್ಲೂಕು, **ನವಲಗುಂದ:**– ನವಲಗುಂದ **ಹಾಗೂ** ಅಣ್ಣೀಗೇರಿ ತಾಲ್ಲೂಕು, |
| 12 | ಕಲ್ಬುರ್ಗಿ | > **ಕಲ್ಬುರ್ಗಿ:**– ನಗರೇಶ್ವರ ದೇವಸ್ಥಾನ, ಗುಲ್ಬರ್ಗಾ > **ಸೇಡಂ:**– ಶ್ರೀ ಕನ್ಯಕಾಪರಮೇಶ್ವರಿ ದೇವಾಲಯ ವಾಸವಿ ಕಲ್ಯಾಣ ಮಂಟಪ ಸೇಡಂ, ಕಲ್ಬುರ್ಗಿ | **ಕಲ್ಬುರ್ಗಿ:** ಕಲ್ಬುರ್ಗಿ ತಾಲ್ಲೂಕು, ಗುರುಮಿಟ್ಕಲ್, **ಸೇಡಂ:**– ಸೇಡಂ, ಚಿತ್ತಾಪುರ, **ಹಾಗೂ** ಚಿಂಚೋಳಿ ತಾಲ್ಲೂಕು, |
| 13 | ಹಾಸನ | > **ಹಾಸನ:**– ವಾಸವಿ ಮಹಲ್, ಹಾಸನ > **ಅರಸೀಕೆರೆ:**– ವಾಸವಿ ಮಹಲ್, ಅರಸೀಕೆರೆ<br>> **ಹೊಳೇನರಸೀಪುರ:** ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ಹೊಳೇನರಸೀಪುರ | **ಹಾಸನ:**– ಹಾಸನ, ಚೆನ್ನರಾಯಪಟ್ಟಣ ತಾಲ್ಲೂಕು, ಸಕಲೇಶಪುರ, ಬೇಲೂರು,**ಅರಸೀಕರೆ:**– ಅರಸೀಕರೆ ತಾಲ್ಲೂಕು, **ಹೊಳೇನರಸೀಪುರ:**– ಹೊಳೇನರಸೀಪುರ ತಾಲ್ಲೂಕು, ಅರಕಲಗೂಡು, |
| 14 | ಹಾವೇರಿ | > **ಹಿರೇಕೆರೂರು:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ಪಟ್ಟಣ ಪಂಚಾಯಿತಿ ಪಕ್ಕ, ಮುಖ್ಯರಸ್ತೆ, ಹಿರೇಕೆರೂರು | **ಹಾವೇರಿ ಜಿಲ್ಲೆ** |
| 15 | ಕೋಲಾರ | > **ಕೋಲಾರ:**– ಮಿನಿ ಬಿಂದುಮಲ್ಲಮ್ ಕಲ್ಯಾಣ ಮಂಟಪ, ಕಠಾರಿಪಾಳ್ಯ ರಸ್ತೆ, ಕೋಲಾರ > **ಬಂಗಾರಪೇಟೆ:**– ವಾಸವಿ ಕಲ್ಯಾಣ ಮಂಟಪ ಬಜಾರ್ ರೋಡ್ ಬಂಗಾರಪೇಟೆ > **ಮುಳಬಾಗಲು:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ, ಬಜಾರ್ ರಸ್ತೆ, ಮುಳಬಾಗಲು<br>> **ಶ್ರೀನಿವಾಸಪುರ:**– ವಾಸವಿ ಕಲ್ಯಾಣ ಮಂಟಪ, ಎಮ್.ಜಿ.ರಸ್ತೆ, ಶ್ರೀನಿವಾಸಪುರ | **ಕೋಲಾರ:**– ಕೋಲಾರ ತಾಲ್ಲೂಕು, **ಬಂಗಾರಪೇಟೆ:**– ಬಂಗಾರಪೇಟೆ **ಹಾಗೂ** ಮಾಲೂರು ತಾಲ್ಲೂಕು,<br>**ಮುಳಬಾಗಲು:**– ಮುಳಬಾಗಲು ತಾಲ್ಲೂಕು, **ಶ್ರೀನಿವಾಸಪುರ:**– ಶ್ರೀನಿವಾಸಪುರ ತಾಲ್ಲೂಕು, |
| 16 | ಕೊಪ್ಪಳ | > **ಗಂಗಾವತಿ:**– ವಾಸವಿ ವಿದ್ಯಾಪೀಠ, ಗಂಗಾವತಿ > **ಕೊಪ್ಪಳ:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ಕೊಪ್ಪಳ<br>> **ಕಾರಟಗಿ:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ನವಲಿ ರಸ್ತೆ, ವಾಸವಿ ನಗರ, ಕಾರಟಗಿ | **ಗಂಗಾವತಿ:**– ಗಂಗಾವತಿ **ಹಾಗೂ** ಕುಷ್ಟಗಿ ತಾಲ್ಲೂಕು, **ಕೊಪ್ಪಳ:** ಕೊಪ್ಪಳ **ಹಾಗೂ** ಯಲಬುರ್ಗ ತಾಲ್ಲೂಕು,<br>**ಕಾರಟಗಿ:**– ಕಾರಟಗಿ ತಾಲ್ಲೂಕು, |
| 17 | ಮೈಸೂರು | > **ಮೈಸೂರು:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ಶಿವರಾಂ ಪೇಟೆ, ಮೈಸೂರು<br>> **ಹುಣಸೂರು:** ಶ್ರೀ ವಾಸವಿ ವಾನಪ್ರಸ್ಥಶ್ರಾಮ, ಬ್ರಾಹ್ಮಣರ ಬೀದಿ, ಹುಣಸೂರು | **ಮೈಸೂರು:** ಮೈಸೂರು **ಹಾಗೂ** ನಂಜನಗೂಡು ತಾಲ್ಲೂಕು, ಟಿ.ನರಸಿಪುರ **ಹುಣಸೂರು:**– ಹುಣಸೂರು, ಪಿರಿಯಪಟ್ಟಣ, ಹೆಚ್.ಡಿ.ಕೋಟೆ **ಹಾಗೂ** ಕೆ.ಆರ್.ನಗರ ತಾಲ್ಲೂಕು, |
| 18 | ರಾಯಚೂರು | > **ರಾಯಚೂರು:**– ಕೊಂಡ ಸರಸ್ವತಮ್ಮ ಹನುಂತಯ್ಯ ಇಂಗ್ಲೀಷ್ ಮಾಧ್ಯಮ ಶಾಲೆ, ತಿಮ್ಮಾಪುರ ಪೇಟೆ ರಾಯಚೂರು > **ಮಾನ್ವಿ:**– ಶ್ರೀ ಪಂಪ ವಿರೂಪಾಕ್ಷೇಶ್ವರ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ ಕಲ್ಮಠ ಮಾನ್ವಿ, ಪಂಪ ಹೌಸಿಂಗ್ ಕಾಲೋನಿ ಮಾನವಿ ಜಿಲ್ಲಾ ರಾಯಚೂರ್ > **ಸಿಂಧನೂರು:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, > **ಲಿಂಗಸೂಗೂರು:**– ಕನ್ಯಕಾಪರಮೇಶ್ವರಿ ದೇವಸ್ಥಾನ, > **ಮುದುಗಲ್:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ, ಮುದುಗಲ್> **ಗಾಣದಾಳ:**– ಪಂಚಮುಖಿ ಆರ್ಯವೈಶ್ಯ ಛತ್ರ, ಪಂಚಮುಖಿ | **ರಾಯಚೂರು:** ರಾಯಚೂರು **ಹಾಗೂ** ದೇವದುರ್ಗ ತಾಲ್ಲೂಕು, **ಮಾನ್ವಿ:** ಮಾನ್ವಿ ತಾಲ್ಲೂಕು, **ಸಿಂಧನೂರು:** ಸಿಂಧನೂರು ತಾಲ್ಲೂಕು,**ಲಿಂಗಸೂಗೂರ:**– ಲಿಂಗಸೂಗೂರು ತಾಲ್ಲೂಕು, **ಮುದುಗಲ್:**– ಮುದುಗಲ್ ಹೋಬಳಿ, **ಗಾಣದಾಳ:**– **(ಗಿಲ್ಲೆಸುಗುರು, ಕುರುಡಿ, ಏರಿಗೇರಿ)** |
| 19 | ರಾಮನಗರ | > **ಮಾಗಡಿ:**– ಕನ್ನಿಕಾ ಮಹಲ್, ಮುಖ್ಯ ರಸ್ತೆ, ಮಾಗಡಿ > **ಚೆನ್ನಪಟ್ಟಣ:**– ಕನ್ನಿಕಾ ಮಹಲ್, ಎಂ.ಜಿ.ರಸ್ತೆ, ಚೆನ್ನಪಟ್ಟಣ<br>> **ರಾಮನಗರ:**– ವಾಸವಿ ವಿದ್ಯಾ ಸಂಸ್ಥೆ, ಎಂ.ಜಿ.ರೋಡ್, ರಾಮನಗರ | **ಮಾಗಡಿ:** ಮಾಗಡಿ ತಾಲ್ಲೂಕು, **ಚೆನ್ನಪಟ್ಟಣ:**– ಚೆನ್ನಪಟ್ಟಣ ತಾಲ್ಲೂಕು, **ರಾಮನಗರ:**– ರಾಮನಗರ **ಹಾಗೂ** ಕನಕಪುರ ತಾಲ್ಲೂಕು, |
| 20 | ಶಿವಮೊಗ್ಗ | > **ಶಿವಮೊಗ್ಗ:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, ಗಾಂಧಿ ಬಜಾರ್, ಶಿವಮೊಗ್ಗ | **ಶಿವಮೊಗ್ಗ ಜಿಲ್ಲೆ** |
| 21 | ತುಮಕೂರು | > **ತುಮಕೂರು:**– ವಾಸವಿ ವಿದ್ಯಾಪೀಠ, ಗಾರ್ಡನ್ ರಸ್ತೆ, ತುಮಕೂರು > **ತಿಪಟೂರು:**– ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ, ಸಂತೇಪೇಟೆ ತಿಪಟೂರು > **ಸಿರಾ:**– ಶ್ರೀ ಕನ್ಯಕಾ ಪರಮೇಶ್ವರಿ ಪತ್ತಿನ ಸಹಕಾರ ಸಂಘ, ರಾಘವೇಂದ್ರ ಮಠದ ರಸ್ತೆ, ಸಿರಾ > **ಪಾವಗಡ:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ, ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ರಸ್ತೆ, ಪಾವಗಡ > **ಮಧುಗಿರಿ:**– ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ, ದೊಡ್ಡಪೇಟೆ, ಮಧುಗಿರಿ > **ಕುಣಿಗಲ್:**– ವಾಸವಿ ಪ್ರಾರ್ಥನಾ ಮಂದಿರ ದೊಡ್ಡಪೇಟೆ ಕುಣಿಗಲ್ > **ಹುಳಿಯಾರು:**– ವಾಸವಿ ಕಲ್ಯಾಣ ಮಂದಿರ ಎಸ್.ಕೆ.ಪಿ ದೇವಸ್ಥಾನ ರಸ್ತೆ. ಹುಳಿಯಾರು > **ಕೊರಟಗೆರೆ:**– ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಅವರಣ, ಕೊರಟಗೆರೆ | **ತುಮಕೂರು:**– ತುಮಕೂರು **ಹಾಗೂ** ಗುಬ್ಬಿ ತಾಲ್ಲೂಕು, **ತಿಪಟೂರು:**– ತಿಪಟೂರು **ಹಾಗೂ** ತುರುವೇಕೆರೆ ತಾಲ್ಲೂಕು,<br>**ಸಿರಾ:** ಸಿರಾ ತಾಲ್ಲೂಕು, **ಪಾವಗಡ:**– ಪಾವಗಡ ತಾಲ್ಲೂಕು, **ಮಧುಗಿರಿ:**– ಮಧುಗಿರಿ ತಾಲ್ಲೂಕು,<br>**ಕುಣಿಗಲ್:**– ಕುಣಿಗಲ್ ತಾಲ್ಲೂಕು, **ಹುಳಿಯಾರು:**– ಚಿಕ್ಕನಾಯಕನಹಳ್ಳಿ ತಾಲ್ಲೂಕು,<br>**ಕೊರಟಗೆರೆ:**– ಕೊರಟಗೆರೆ ತಾಲ್ಲೂಕು, |
| 22 | ಯಾದಗಿರಿ | > **ಯಾದಗಿರಿ:**– ವಾಸವಿ ಕಲ್ಯಾಣ ಮಂಟಪ, ಹತ್ತಿರ ಬ್ರಹ್ಮನವಾಡಿ, ರಾಘವೇಂದ್ರಸ್ವಾಮಿ ರಸ್ತೆ, ಯಾದಗಿರಿ<br>> **ಶೋರಾಪುರ :** ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ, ಗೋಪಾಲ ಕೃಷ್ಣ ದೇವಸ್ಥಾನದ ಹತ್ತಿರ, ಶೋರಾಪುರ | **ಯಾದಗಿರಿ:**– ಯಾದಗಿರಿ ತಾಲ್ಲೂಕು, **ಶೋರಾಪುರ:**– ಶೋರಾಪುರ ಹಾಗೂ ಶಾಪುರ |
| 23 | ವಿಜಯನಗರ | > **ವಿಜಯನಗರ:**– ಹೊಸಪೇಟೆ ವಾಸವಿ ದೇವಸ್ಥಾನ, ಹಂಪಿ ರಸ್ತೆ, ವಿಜಯನಗರ > **ಕೂಡ್ಲಿಗಿ** – ವಾಸವಿ ದೇವಸ್ಥಾನದ ಆವರಣ, ಕೂಡ್ಲಿಗಿ **ಹರಪನಹಳ್ಳಿ:**– ಶ್ರೀ ವಾಸವಿ ಕಲ್ಯಾಣ ಮಂಟಪ, ಕೊಟ್ಟೂರು ರಸ್ತೆ, ಹರಪನಹಳ್ಳಿ | **ವಿಜಯನಗರ:**– ವಿಜಯನಗರ, ಹಡಗಲಿ **ಹಾಗೂ** ಹಗರಿಬೊಮ್ಮನಹಳ್ಳಿ ತಾಲ್ಲೂಕು, **ಹರಪ್ಪನಹಳ್ಳಿ:**– ಹರಪ್ಪನಹಳ್ಳಿ ತಾಲ್ಲೂಕು, **ಕೂಡ್ಲಿಗಿ:** ಕೂಡ್ಲಿಗಿ, ಕೊಟ್ಟರು |

# ಬೆಂಗಳೂರು ನಗರ ಜಿಲ್ಲೆಯ ಮತಗಟ್ಟೆಗಳ ಮಾಹಿತಿ

| ಸಂಖ್ಯೆ | ಸ್ಥಳ | ಚುನಾವಣೆ ಮತಗಟ್ಟೆಯ ಸ್ಥಳ ಮತ್ತು ವಿಳಾಸ | ಈ ಮತಗಟ್ಟೆಗೆ ಸೇರಿದ ಸ್ಥಳಗಳು ಮತದಾರರ ಸಂಖ್ಯೆ |
|---|---|---|---|
| 1 | ಮಲ್ಲೇಶ್ವರಂ | ಮಲ್ಲೇಶ್ವರಂ ಶ್ರೀ ರವಿಶಂಕರ್ ಸಭಾಂಗಣ, 8ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು | **ಮಲ್ಲೇಶ್ವರಂ–560003, ಶ್ರೀರಾಮಪುರಂ–560021, ಯಶವಂತಪುರ–560022, ಶೇಷಾದ್ರಿಪುರ–560020 ಗಾಂಧಿನಗರ–560009, ಮಲ್ಲೇಶ್ವರಂ ಪಶ್ಚಿಮ–560055, ಸದಾಶಿವನಗರ–560080–22** |
| 2 | ಮಹಾಲಕ್ಷ್ಮೀ ಲೇಔಟ್ | ವಾಸವಿ ದೇವಸ್ಥಾನ, 7ನೇ ಮೈನ್, 8ನೇ ಕ್ರಾಸ್, ಮಹಾಲಕ್ಷ್ಮಿಲೇಔಟ್, ಬೆಂಗಳೂರು– 560086 | ರಾಜಾಜಿನಗರ – 560010, ಬಸವೇಶ್ವರನಗರ– 560079, ಮಹಾಲಕ್ಷ್ಮೀ ಲೇಔಟ್– 560086, ನಂದಿನಿ ಲೇಔಟ್–560096, ಲಗ್ಗೆರೆ–560058, ಪೀಣ್ಯ ದಾಸರಹಳ್ಳಿ–560057, ಬಗಲಗುಂಟೆ–560073, ಹೆಸರುಘಟ್ಟ–560089, ದಾಸನಪುರ–562162 |
| 3 | ವಿಜಯನಗರ | ವಾಸವಿ ಯೂತ್ ಸೆಂಟರ್, ವಾಸವಿ ವಿದ್ಯಾಪೀಠ, ನಂ.66, 2ನೇ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು–560040 | ವಿಜಯನಗರ– 560040, ಮಾಗಡಿ ರೋಡ್–560023, ಮೈಸೂರು ರಸ್ತೆ–560026, ನಾಗರಬಾವಿ–560072 **ಹೇರೋಹಳ್ಳಿ**–560091, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್–44, ನಾಯಂಡನಹಳ್ಳಿ– 560039, ಜನಪ್ರಿಯ ಟೌನ್‌ಶಿಪ್, ಕೆಂಗೇರಿ–560060, ಉಲ್ಲಾಳ ಉಪನಗರ–560056, ಹಂಪಿನಗರ–560104, ರಾಜರಾಜೇಶ್ವರಿನಗರ–560098, **ಕುಂಬಳಗೂಡು–560074,** |
| 4 | ಶ್ರೀನಗರ | ನಂ 215, 9ನೇ ಮುಖ್ಯ ರಸ್ತೆ, ಶ್ರೀನಗರ, ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಹತ್ತಿರ, ಬೆಂಗಳೂರು –560050 | ಹನುಮಂತನಗರ–560050, ಗಿರಿನಗರ / ಇಟ್ಟಮಡು–560085, ನರಸಿಂಹರಾಜ ಕಾಲೋನಿ/ಕೆ.ಜಿ.ನಗರ–560019, |
| 5 | ವಿ.ವಿ.ಪುರಂ | ವಾಸವಿ ವಿದ್ಯಾನಿಕೇತನ, ವಾಣಿವಿಲಾಸ ರೋಡ್, ವಿ.ವಿ.ಪುರಂ, ಬೆಂಗಳೂರು 560004 | ಬಸವನಗುಡಿ–560004, ಜೆ.ಸಿ.ರಸ್ತೆ–560002, ಚಾಮರಾಜಪೇಟೆ–560018, ತ್ಯಾಗರಾಜನಗರ–560028, ಚಿಕ್ಕಪೇಟೆ–560053, ಸಂಪಂಗಿರಾಮನಗರ–560027, ಜೆ.ಸಿ.ನಗರ–560006, |
| 6 | ಕುಮಾರಸ್ವಾಮಿ ಲೇಔಟ್ | ವಾಸವಿ ದೇವಸ್ಥಾನ, ಕುಮಾರಗಿರಿ, 1ನೇ ಹಂತ, 95ನೇ ಕ್ರಾಸ್, ದಯಾನಂದಸಾಗರ ಹಾಸ್ಪಿಟಲ್ ಹತ್ತಿರ ಕುಮಾರಸ್ವಾಮಿ ಲೇಔಟ್, ಬೆಂಗಳೂರು – 560078 | ಜೆ.ಪಿ.ನಗರ–560078, ಬಿ.ಎಸ್.ಕೆ.2ನೇ ಹಂತ/ಪದ್ಮನಾಭನಗರ–560070, ಚಿಕ್ಕಲ್ಲಸಂದ್ರ–560061, ದೊಡ್ಡಕಲ್ಲಸಂದ್ರ–560062, ಬನ್ನೇರುಘಟ್ಟ ರಸ್ತೆ–560076, ಗೊಟ್ಟಿಗೆರೆ–560083, ಕೊತ್ತನೂರು–560077, ಕನಕಪುರ ಮುಖ್ಯ ರಸ್ತೆ–560111 |
| 7 | ಜಯನಗರ | ವಾಸವಿ ವೇದ ಪಾಠ ಶಾಲೆ , ನಂ.2, 5ನೇ ಮೈನ್, 22ನೇ ಕ್ರಾಸ್, 1ನೇ ಮತ್ತು 3ನೇ ಬ್ಲಾಕ್‌ನ ಮಧ್ಯ, ಜಯನಗರ, ಬೆಂಗಳೂರು– 560011 | ಜಯನಗರ 2ನೇ ಹಂತ–560011, ಜಯನಗರ 7ನೇ ಹಂತ–560082, ಜಯನಗರ ತಿಲಕ್‌ನಗರ–560041, ಬೊಮ್ಮನಹಳ್ಳಿ–560068, ಜಯನಗರ ಪೂರ್ವ–560069, ಹೆಚ್.ಎಸ್.ಆರ್.ಲೇಔಟ್–560102, ಎಲೆಕ್ಟ್ರಾನಿಕ್‌ಸಿಟಿ–560100, ಹೆಬ್ಬಗೋಡಿ–560099, ಆರ್.ವಿ.ನಿಕೇತನ್–560059, ಕೋರಮಂಗಲ–560095, ಚಂದಾಪುರ–560081, ಬಿ.ಎಸ್.ಕೆ, 3ನೇ ಹಂತ–561202, ತಾವರೆಕೆರೆ–560029 |
| 8 | ಕೆ.ಆರ್.ಪುರಂ | ವಾಸವಿ ಮಹಲ್ ಕಲ್ಯಾಣ ಮಂಟಪ, ವಾಸವಿ ಮಹಾಲ್ ರಸ್ತೆ, ಕೆ.ಆರ್.ಪುರಂ, ಬೆಂಗಳೂರು–560 036 | ಕೆ.ಆರ್.ಪುರಂ–ದೇವಸಂದ್ರ 560036, ಹೆಚ್.ಎ.ಎಲ್. 2ನೇ ಹಂತ–560008, ಕೆ.ಆರ್.ಪುರಂ– ರಾಮಮೂರ್ತಿನಗರ 560016–91, ಮಾರತ್‌ಹಳ್ಳಿ–560037, ಲಿಂಗರಾಜಪುರಂ–560084, ಜೀವನ್ ಭೀಮಾನಗರ–560075, ಇಂದಿರಾನಗರ–560038, ಹೊರಮಾವು–560043, ಸರ್ಜಾಪುರ–562125, ವಿರ್ಗೋನಗರ–560049, ಅಗರಂ–560007 ಕೋರಮಂಗಲ–560034, ನಾಗವಾರ–560045, ಮಾರುತಿ ಸೇವಾನಗರ–560033, ವೈಟ್‌ಫೀಲ್ಡ್–560066, ಕಾರಮೇಲರಾಮ್–560035, ವಿಮಾನಪುರ–560017, ಅತ್ತಿಬೆಲೆ–562107, ಕಡಬಗೆರೆ–562130, ಅನೇಕಲ್–562106 ದೊಮ್ಮಲೂರು–560071, ಕಾಡುಗೋಡಿ–560067, ವರ್ತೂರು–560087, ಮಹದೇವಪುರ–560148, ಕೆ.ಆರ್.ಪುರಂ ಸೌತ್–560048 |
| 9 | ಶಿವಾಜಿನಗರ | ಶ್ರೀ ನಗರೇಶ್ವರೇಶ್ವರ **ಶ್ರೀ ಕನ್ಯಕಾಪರಮೇಶ್ವರಿ** ದೇವಸ್ಥಾನ, ನಂ 27, ಶರಾಪು ಬೀದಿ ಬೆಂಗಳೂರು –560001 | ಶಿವಾಜಿನಗರ–560001, ಆಡುಗೋಡಿ–560030, ಶಿವನಚೆಟ್ಟಿ ಗಾರ್ಡನ್–560042, ಆಸ್ಟಿನ್ ಟೌನ್–560047, ಬ್ರಾಡ್ ವೆ ರೋಡ್–560051, ಫ್ರೇಸರ್ ಟೌನ್–560005, ಬೆನ್‌ಸನ್ ರೋಡ್–560046, ರಿಚ್‌ಮಂಡ್ ರೋಡ್–560025 |
| 10 | ಸಂಜಯನಗರ | ವಾಸವಿ ಪ್ರವಚನ ಮಂದಿರ , 1ನೇ ಮಹಡಿ, **ಶ್ರೀ ಕನ್ಯಕಾಪರಮೇಶ್ವರಿ** ದೇವಾಲಯ, 78ಎ, ಎಸ.ಕೆ.ಪಿ. ದೇವಸ್ಥಾನದ ರಸ್ತೆ, 5ನೇ ಮುಖ್ಯ ರಸ್ತೆ,ಅಮರ ಜ್ಯೋತಿ ಲೇಔಟ್, ಸಂಜಯನಗರ, ಬೆಂಗಳೂರು 560094 | ಆರ್.ಟಿ.ನಗರ–560032, ಮತ್ತಿಕರೆ–560054, ವಿದ್ಯಾರಣ್ಯಪುರ–560097, ಯಲಹಂಕ–560064, ಜಾಲಹಳ್ಳಿ–560013 ಆರ್.ಎಂ.ವಿ.ಎಕ್ಸ್‌ಟೆನ್‌ಶನ್– 560094, ಕೊಡಿಗೆಹಳ್ಳಿ–560092 ಕೆಂಪಾಪುರ–560024, ಚಿಕ್ಕಬಾಣವಾರ–560090, ವಸಂತನಗರ–560052, ಸಿ.ವಿ.ರಾಮನ್ ನಗರ–560093, ಯಲಹಂಕ–560106–52, ಜಾಲಹಳ್ಳಿವೆಸ್ಟ್–560015, ಜಿ.ಕೆ.ವಿ.ಕೆ–560065, ಬೆಳಂದೂರ್–560103, ಯಲಹಂಕ–560063, ಚಾಮರಾಜಸಾಗರ–562110, ಚಿಕ್ಕಜಾಲ–562157 ಮಾರಸಂದ್ರ, ಯಲಹಂಕ –561203, ಬಾಗಲೂರು–562149, ಆರುಡಿ–561204, ಸೈನ್ಸ್ ಇನ್‌ಸ್ಟಿಟ್ಯೂಟ್–560012, ಜಾಲಹಳ್ಳಿ ಈಸ್ಟ್– 560014, ಅಜಿತ್‌ನಗರ–560107 |

**ಚುನಾವಣೆಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಮಹಾಸಭೆಯ ಅಧಿಕೃತ Website www. Karnatakaaryavysyamahasabha.com ಅನ್ನು ಸಂಪರ್ಕಿಸಲು ಕೋರಿದೆ.**

ಮುದ್ರಕರು: ಗಿರೀಶ್ ಪ್ರಿಂಟರ್ಸ್, 163, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020 ಇ–ಮೇಲ್ : info@gireeshprinters.com website : www.gireeshprinters.com
ಸಂಪಾದಕರು: ರಾ.ಪ. ರವಿಶಂಕರ್ ಮತ್ತು ಪ್ರಕಾಶಕರು: ಎಸ್ ಕೆ. ಶೇಷಾಚಲ ವಾರ್ತಾಪತ್ರ ಸಮಿತಿಯ ಚೇರ್‌ಮನ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು–09 ಫೋನ್: 22206151/22206152